ಟಿಬೆಟಿಯನ್ನರಿಗಾಗಿ ಮೀಸಲಿರಿಸಿ ಈ ದೇವಸ್ಥಾನವನ್ನು ಸ್ಥಾಪಿಸಲಾಯಿತು. ಸುಮಾರು 25,000ಕ್ಕೂ ಅಧಿಕ ಟಿಬೆಟಿಯನ್ ಮಕ್ಕಳು, ಯುವಕರು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿನ ತಾಶಿಲಂಪು ವಿಹಾರ ಹಾಗೂ ನಂಮ್ಡ್ರೋಲಿಂಗ್ ವಿಹಾರಗಳೂ ಅತ್ಯಂತ ಪ್ರಸಿದ್ಧವಾದ ಶಿಕ್ಷಣ ಸಂಸ್ಥೆಗಳು.

ಬೃಹದಾಕಾರದ ಚಿನ್ನದ ದೇಗುಲ ಎಲ್ಲರ ಗಮನ ಸೆಳೆಯುತ್ತದೆ. ಗೋಡೆಯ ಮೇಲಿರುವ ವರ್ಣಾಲಂಕಾರ ವೈವಿಧ್ಯತೆಯಿಂದ ಸುಂದರವಾಗಿ ಗೋಚರಿಸುತ್ತದೆ. ಈ ದೇಗುಲದ ಒಳಗಿರುವ ಪದ್ಮಸಂಭವ, ಅಮಿತಾಯುಶ್ ಹಾಗೂ ಗೌತಮಬುದ್ಧನ 40 ಅಡಿ ಎತ್ತರದ ಮೂರು ಚಿನ್ನದ ಮೂರ್ತಿಗಳು ಇಲ್ಲಿನ ಪ್ರಮುಖ ಆಕರ್ಷಣೆಗಳು.

ದೇವಾಲಯ ಹಾಗೂ ವಿಹಾರದ ಗೋಡೆಗಳ ಮೇಲೆ ಬೌದ್ಧದೇವತೆಗಳ ಹಾಗೂ ರಾಕ್ಷಸರ ಪೌರಾಣಿಕ ವರ್ಣಚಿತ್ರಗಳನ್ನು ರಮಣೀಯವಾಗಿ ಚಿತ್ರಿಸಲಾಗಿದ್ದು ಚಿತ್ತಾಕರ್ಷಕವಾಗಿವೆ. ಬಲಿಪೀಠವನ್ನು ಮೇಣದಬತ್ತಿ, ಧೂಪದ್ರವ್ಯ ಹಾಗೂ ಪುಷ್ಪಗಳಿಂದ ಸಿಂಗರಿಸುತ್ತಾರೆ. ದೇವಾಲಯದ ಬಾಗಿಲುಗಳ ಮೇಲೆ ಮಣಿಗಳಿಂದ ಪೋಣಿಸಲಾದ ಉದ್ದುದ್ದ ಸರಗಳು ಕಾಣಸಿಗುತ್ತವೆ. ಅಲ್ಲದೆ ಮೇಲ್ಛಾವಣಿಗಳ ಮೇಲೆ ಬಿಡಿಸಲಾದ ಹಲವು ವಿನ್ಯಾಸದ ಮರದ ಕೆತ್ತನೆಗಳು ಹಾಗೂ ಪ್ರಾಚೀನ ಕಾಲದ ಬುದ್ಧನ ಕಥೆಗಳನ್ನು ಸಾರುವ ಬರಹಗಳು ಮನಮೋಹಕವಾಗಿವೆ. ದೇವಾಲಯದ ಹೊರಭಾಗದಲ್ಲಿ ಕಣ್ಮನ ಸೆಳೆಯುವ ಹೂಗಳಿಂದ ತುಂಬಿ ತುಳುಕುವ ಉದ್ಯಾನವನ ಎಲ್ಲಕ್ಕೆ ಕಳಶವಿಟ್ಟಂತೆ ಇದೆ.

ದೇವಾಲಯದ ಹೊರಭಾಗದಲ್ಲಿ ಎಲ್ಲೆಡೆ ಬೌದ್ಧ ಸನ್ಯಾಸಿಗಳು ಉದ್ದನೆಯ ಬಣ್ಣದ ನಿಲುವಂಗಿ ತೊಟ್ಟು ಓಡಾಡುತ್ತಾರೆ. ಉದ್ಯಾನವನಗಳಲ್ಲಿ ಬೌದ್ಧ ಮಕ್ಕಳು ತಮ್ಮ ಕಲಿಕೆಯಲ್ಲಿ, ಆಟ ಪಾಟಗಳಲ್ಲಿ ಮಗ್ನರಾಗಿರುತ್ತಾರೆ.

ಹಬ್ಬಗಳ ಸಂದರ್ಭದಲ್ಲಿ ಇಲ್ಲಿ ಕೇಳಿಸುವ ವಾದ್ಯ ಸಂಗೀತ ದಿವ್ಯಾನುಭವ ನೀಡುವಂಥದು. ಬಣ್ಣ ಬಣ್ಣದ ಬಟ್ಟೆಗಳನ್ನು ತೂಗುಹಾಕಿರುವ ಮನೆಗಳ ಮುಂದೆ ಓಡಾಡುವಾಗ ಟಿಬೆಟ್‌ನಲ್ಲೇ ಇದ್ದೇವೇನೋ ಅನ್ನಿಸುತ್ತದೆ.

